# ಸದಾಶಿವ ಆಯೋಗ ವರದಿ ತಿರಸ್ಕಾರಕ್ಕೆ ಒತ್ತಾಯ



ದಾವಣಗೆರೆ

ಪರಿಶಿಷ್ಟ ಜಾತಿಗಳ ಮಧ್ಯೆ ಒಡಕು ಮೂಡಲು ಕಾರಣವಾಗಿರುವ ನ್ಯಾ.ಎ.ಜೆ. ಸದಾಶಿವ ಆಯೋಗದ ವರದಿಯನ್ನು ರಾಜ್ಯ ಸರ್ಕಾರ ತಿರಸ್ಕರಿಸಬೇಕೆಂದು ಒತ್ತಾಯಿಸಿ ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದ ಕಾರ್ಯಕರ್ತರು ನಗರದ ಡಿಸಿ ಕಚೇರಿ ಎದುರು ಗುರುವಾರ ಧರಣಿ ನಡೆಸಿ, ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಧರಣಿನಿರತರು, ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿರುವ ಜನರ ಸ್ಥಿತಿಗತಿಗಳ ಬಗ್ಗೆ ಅಧ್ಯಯನ ನಡೆಸಿ ವರದಿ ಸಲ್ಲಿಸಲು ರಾಜ್ಯ ಸರ್ಕಾರ ಹಿಂದೆ ನ್ಯಾಯಮೂರ್ತಿ ಎ.ಜೆ.ಸದಾಶಿವ ಅವರ ಅಧ್ಯಕ್ಷತೆಯಲ್ಲಿ ಆಯೋಗವನ್ನು ಸ್ಥಾಪಿಸಿತ್ತು. ಆದರೆ, ಆಯೋಗವು ಸಮಗ್ರವಾಗಿ ಅಧ್ಯಯನ ನಡೆಸದೇ, ಎಲ್ಲೋ ಕೂತು ನಾಲ್ಕೈದು ಜನರಿಂದ ಮಾಹಿತಿ ಪಡೆದು ಪರಿಶಿಷ್ಟ ಜಾತಿಗೆ ಇರುವ ಮೀಸಲಾತಿಯನ್ನು ವರ್ಗೀಕರಿಸಿ ಕೇವಲ ಮೂರೇ ಸಮುದಾಯಗಳಿಗೆ ಒಳ ಮೀಸಲಾತಿ ಕಲ್ಪಿಸಬೇಕೆಂದು ಶಿಫಾರಸ್ಸು ಮಾಡಿ ವರದಿ ನೀಡಿರುವುದು ಅತ್ಯಂತ ಅವೈಜ್ಞಾನಿಕ ಹಾಗೂ ಸಂವಿಧಾದನ ಆಶಯಕ್ಕೆ ವಿರುದ್ಧವಾಗಿದೆ ಎಂದು ಆರೋಪಿಸಿದರು.

ಪರಿಶಿಷ್ಟರ ಸ್ಥಿತಿಗತಿಯ ಬಗ್ಗೆ ಅಧ್ಯಯನ ಮಾಡಬೇಕಾಗಿದ್ದ ಸದಾಶಿವ ಆಯೋಗ, ಮೂಲ ಉದ್ದೇಶವನ್ನು ಮರೆತು, ಕೇವಲ ಮೂರು ಸಮುದಾಯಗಳಿಗೆ ಒಳ ಮೀಸಲಾತಿ ಕಲ್ಪಿಸಿರುವುದರಿಂದ 101 ಜಾತಿಗಳ ಪೈಕಿ 99 ಜಾತಿಗಳಿಗೆ ಅನ್ಯಾಯವಾಗಲಿದೆ. ಅಲ್ಲದೆ, ಈ ವರದಿ ಸಲ್ಲಿಕೆಯಾದಾಗಿನಿಂದಲೂ ದಲಿತ ಸಮುದಾಯಗಳ ಒಳಗೆ ಪರಸ್ಪರ ದ್ವೇಷ, ಅಸೂಯೇ, ಅವಮಾನ ಉಂಟಾಗಿ ಜಾತಿ, ಜಾತಿಗಳ ಮಧ್ಯೆ ಸಂಘರ್ಷ ಏರ್ಪಟ್ಟಿದೆ ಎಂದು ದೂರಿದರು.

ಸದಾಶಿವ ಆಯೋಗವು ಸಮಗ್ರವಾಗಿ ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿರುವ ಎಲ್ಲಾ ಜಾತಿಗಳ ಆರ್ಥಿಕ, ಶೈಕ್ಷಣಿಕ, ಔದ್ಯೋಗಿಕ ಅಂಶಗಳ ಬಗ್ಗೆ ವಸ್ತುನಿಷ್ಟ ಸಮೀಕ್ಷೆ ಮಾಡಬೇಕಾಗಿತ್ತು. ಆದರೆ, ತರಾತುರಿಯಲ್ಲಿ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಸಭೆ ನಡೆಸಿ, ಬೆರಳಣಿಕೆಯಷ್ಟು ಮುಖಂಡರ ಅಭಿಪ್ರಾಯ ಪಡೆದು ಒಳ ಮೀಸಲಾತಿಗೆ ಶಿಫಾರಸು ಮಾಡಿರುವುದು ಅತ್ಯಂತ ಖಂಡನೀಯವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ನ್ಯಾ.ಸದಾಶಿವ ಆಯೋಗದ ವರದಿಯಲ್ಲಿರುವ ಶಿಫಾರಸುಗಳನ್ನು ಸರ್ಕಾರ ತಕ್ಷಣವೇ ಬಹಿರಂಗ ಪಡಿಸಬೇಕು. ದಲಿತ ಹಿಂದುಳಿದ ಅಲ್ಪಸಂಖ್ಯಾತರು ಇತ್ಯಾದಿ ಸಮುದಾಯಗಳಿಗೆ ನೀಡುತ್ತಿರುವ ಮೀಸಲಾತಿಯ ಮಿತಿಯನ್ನು ಶೇ.50ರಿಂದ ಶೇ.75ಕ್ಕೆ ವಿಸ್ತರಿಸಬೇಕು. ಸೋರಿಕೆಯಾಗಿರುವ ವರದಿಯ ಅಂಶಗಳ ಪ್ರಕಾರ ನ್ಯಾ. ಸದಾಶಿವ ಆಯೋಗದ ವರದಿಯು ಅವಾಸ್ತವಿಕ, ಅವೈಜ್ಞಾನಿಕ, ಅಸಂವಿಧಾನಿಕವಾಗಿದ್ದು ತಕ್ಷಣವೇ ಈ ವರದಿಯ ತಿರಸ್ಕಾರಕ್ಕೆ ಕ್ರಮ ಕೈಗೊಳ್ಳಬೇಕು. ಈ ವರದಿಯ ಬಗ್ಗೆ ಸಾರ್ವಜನಿಕ ವಲಯದಲ್ಲಿ ಚರ್ಚೆ ಮಾಡದೇ ತರಾತುರಿಯಲ್ಲಿ ವಿಧಾನಸಭೆಯಲ್ಲಿ ಅಂಗೀಕರಿಸಿ, ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ದುಸಾಹಸಕ್ಕೆ ರಾಜ್ಯ ಸರ್ಕಾರ ಕೈ ಹಾಕಬಾರದು ಎಂದು ಆಗ್ರಹಿಸಿದರು. ಧರಣಿಯಲ್ಲಿ ಒಕ್ಕೂಟದ ರಾಘವೇಂದ್ರ ನಾಯ್ಕ, ಜಯಣ್ಣ, ಎನ್.ಜಯದೇವ ನಾಯ್ಕ, ಆನಂದಪ್ಪ, ಚಿನ್ನಸಮುದ್ರ ಶೇಖರನಾಯ್ಕ್, ತಿಪ್ಪೇಶ್, ವೆಂಕಟೇಶ್, ಚಂದ್ರಪ್ಪ, ಹನುಮಂತಪ್ಪ, ಲಿಂಗರಾಜ ನಾಯ್ಕ ಮತ್ತಿತರರು ಭಾಗವಹಿಸಿದ್ದರು.

# ಬಡ ವಿದ್ಯಾರ್ಥಿಗಳಿಗೆ ಲ್ಯಾಪ್‌ಟ್ಯಾಪ್



ಜಗಳೂರು

ಸರ್ಕಾರ ಉಚಿತವಾಗಿ ಗ್ರಾಮೀಣ ಭಾಗದ ಬಡ ವಿದ್ಯಾರ್ಥಿಗಳಿಗೆ ಲ್ಯಾಪ್ ಟ್ಯಾಪ್ ನೀಡುವ ಮೂಲಕ ನೆರವಿಗೆ ಬಂದಿದ್ದು ಯೋಜನೆಯ ಸದುಪಯೋಗ ಪಡಿಸಿಕೊಳ್ಳುವಂತೆ ಎಂದು ಶಾಸಕ ಹೆಚ್.ಪಿ.ರಾಜೇಶ್ ವಿದ್ಯಾರ್ಥಿಗಳಿಗೆ ಕರೇ ನೀಡಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸರ್ಕಾರದಿಂದ ವಿತರಿಸಿದ ಉಚಿತ ಲ್ಯಾಪ್ ಟಾಪ್ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮ ಮುಖ್ಯಮಂತ್ರಿ ಸಿದ್ದರಾಮಯ್ಯ ಶಿಕ್ಷಣ ಕ್ಷೇತ್ರಕ್ಕೆ ಹಲವು ಯೋಜನೆಗಳನ್ನು ಕೈಗೊಂಡಿದ್ದು ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಪದವಿ ಸ್ನಾತಕೊತ್ತರ ಹಂತದವರೆಗೆ ಉಚಿತ ಶಿಕ್ಷಣ.ಉಚಿತ ಬಟ್ಟೆ ಪುಸ್ತಕ ವಿದ್ಯಾರ್ಥಿ ವೇತನ. ಬಿಸಿಯೂಟ .ಕರ್ನಾಟಕ ದರ್ಶನ .ವಸತಿನಿಲಯ ಸೌಲಭ್ಯ. ಸೇರಿದಂತೆ ಹಲವಾರು ಯೋಜನೆಯನ್ನು ಜಾರಿಗೊಳಿಸಿದ್ದಾರೆ.

ಪದವಿ ವಿದ್ಯಾರ್ಥಿಗಳಿಗೆ ಉನ್ನತ ವಿದ್ಯಾಭ್ಯಾಸಕ್ಕೆ ಅನುಕೂಲಕ್ಕಾಗಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ 2016-17 ಸಾಲಿನಲ್ಲಿ ಪದವಿ ಪ್ರವೇಶ ಪಡೆದ 62 ವಿದ್ಯಾರ್ಥಿಗಳಿಗೆ ಉಚಿತವಾಗಿ ಲ್ಯಾಪ್ ಟಾಪ್ ನೀಡಲಾಗುತ್ತಿದೆ. 2017-18 ನೇ ಸಾಲಿನಿಂದ ಎಲ್ಲಾ ವರ್ಗದ ವಿದ್ಯಾರ್ಥಿಗಳು ಈ ಸೌಲಭ್ಯ ಪಡೆದು ಕೊಳ್ಳಲಿದ್ದಾರೆ ಸರ್ಕಾರ ಸರ್ವರಿಗೂ ಸಮ ಪಾಲು ಸಮಭಾಳು ಎನ್ನುವಂತೆ ಪರಿಶಷ್ಟ ಜಾತಿ ಮತ್ತು ಪಂಗಡದ ಸಮಾಜವನ್ನು ಮೇಲೆತ್ತುವ ಉದ್ದೇಶದಿಂದ ಈ ಕಾರ್ಯ ಕೈಗೊಳ್ಳಲಾಗಿದೆ.

ಇದೇ ವೇಳೆ ವಿದ್ಯಾರ್ಥಿಗಳು ತಮ್ಮ ಅನಿಸಿಕೆ ವ್ಯಕ್ತ ಪಡಿಸಿ ಕಾಲೇಜಿನಲ್ಲಿ ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೆ ಲ್ಯಾಪ್ ಟಾಪ್ ನೀಡಬೇಕು ಹಾಗು ಕಾಲೇಜು ಗೆ ಉಚಿತ ಬಸ್ ಸಂಪರ್ಕ.ಕುಡಿಯುವ ನೀರು.ವಿದ್ಯುತ್. ಶೌಚಾಲಯ .ಕಲ್ಪಿಸಿ ಎಂದು ಮನವಿ ಮಾಡಿದರು .

ಈ ಸಂಧರ್ಭದಲ್ಲಿ ಪ್ರಾಂಶುಪಾಲರಾದ ಬಿ.ಕೆ. ಬಸವರಾಜ್ ಉಪನ್ಯಾಸಕರಾದ ಶಾಂತವೀರಪ್ಪ, ಮಲ್ಲಿಕಾರ್ಜುನ ಖಿಪ್ಪಿ, ಮುಖಂಡರಾದ ಗುರುಸಿದ್ದಪ್ಪ, ಆದರ್ಶ ಸೇರಿದಂತೆ ಇತರರು ಇದ್ದರು.


## ಹೃತ್ಪೂರ್ವಕ ಕೃತಜ್ಞತೆಗಳು

ಹೊಸಪೇಟೆ ನಗರದಲ್ಲಿ ಬಿಜೆಪಿ ಪಕ್ಷದ ವತಿಯಿಂದ 6-1-18 ರಂದು ನಡೆದ **ನವಕರ್ನಾಟಕ ನಿರ್ಮಾಣಕ್ಕಾಗಿ ಪರಿವರ್ತನಾ ಯಾತ್ರೆ**ಗೆ ಆಗಮಿಸಿ ಸಮಾವೇಶದ ಯಶಸ್ಸಿಗೆ ಕಾರಣರಾದ ಪಕ್ಷದ ಎಲ್ಲಾ ಮುಖಂಡರು ಹಾಗೂ ಕಾರ್ಯಕರ್ತರಿಗೆ ಹೃತ್ಪೂರ್ವಕ ಕೃತಜ್ಞತೆಗಳು.



**ಶ್ರೀಮತಿ ಬಿ.ಎಲ್. ರಾಣಿಸಂಯುಕ್ತ**
ಉಪಾಧ್ಯಕ್ಷರು, ರಾಜ್ಯ ಮಹಿಳಾ ಮೋರ್ಚಾ ಹೊಸಪೇಟೆ.


## ನಾಳೆ ರವಿಶಂಕರ್ ಗುರೂಜಿ ಸತ್ಸಂಗ

ದಾವಣಗೆರೆ

ನಗರದ ಎಸ್.ಎಸ್. ಮಲ್ಲಿಕಾರ್ಜುನ ಸಾಂಸ್ಕೃತಿಕ ಕೇಂದ್ರದಲ್ಲಿ ಆರ್ಟ್ ಆಫ್ ಲಿವಿಂಗ್ ಸಂಸ್ಥೆಯಿಂದ ನಾಳೆ (ಜ.13ರಂದು) ಬೆಳಗ್ಗೆ 10.30ಕ್ಕೆ ಮಕರ ಸಂಕ್ರಾಂತಿ ಪ್ರಯುಕ್ತ ಶ್ರೀರವಿಶಂಕರ್ ಗುರೂಜಿ ಸಾನಿಧ್ಯದಲ್ಲಿ ಜ್ಞಾನ ತರಂಗ ಹಾಗೂ ಸತ್ಸಂಗ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಶಿಕ್ಷಕಿ ವಾಣಿರಾವ್ ತಿಳಿಸಿದ್ದಾರೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮಕ್ಕೆ ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ. ಉಸಿರಾಟ ನಿಯಂತ್ರಣದ ಮೂಲಕ ಮಾನಸಿಕ ಒತ್ತಡ ನಿವಾರಿಸಿಕೊಳ್ಳುವ ತಂತ್ರವನ್ನು ರವಿಶಂಕರ್ ಗುರೂಜಿ ಹೇಳಿಕೊಡಲಿದ್ದಾರೆ. ಸಭಿಕರ ಸಂದೇಹಗಳಿಗೆ ಗುರೂಜಿ ಉತ್ತರಿಸಲಿದ್ದಾರೆ ಎಂದರು.

ಜ.22ರಿಂದ 26ರವರೆಗೆ ನಗರದ ಬಕ್ಕೇಶ್ವರ ಕಲ್ಯಾಣ ಮಂಟಪದಲ್ಲಿ ಸುದರ್ಶನ ಕ್ರಿಯಾಯೋಗ ಶಿಬಿರ ನಡೆಯಲಿದ್ದು, ಆಸಕ್ತರು ಹೆಚ್ಚಿನ ಮಾಹಿತಿಗೆ ದೂ:97415 46838, 98867 55788, 96200 76833 ಸಂಪರ್ಕಿಸಬೇಕೆಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಡಾ.ಸಿ.ಆರ್ .ಬಾಣಾಪುರಮಠ್, ಜಿ.ಸುನಂದಾ, ಜಿ.ಆರ್.ರಾಜಶೇಖರ, ರೋಹಿತ್, ಶಿವಮೂರ್ತಿ ಹಾಜರಿದ್ದರು.


ಓದಿರಿ ಪ್ರಜಾಪ್ರಗತಿ
ವೀಕ್ಷಿಸಿ ಪ್ರಗತಿ ಟಿವಿ


# ಸಾಮಾಜಿಕ ಪಿಡುಗು ತಡೆಗೆ ಸಂಕಲ್ಪ ಮಾಡಿ: ಶ್ರೀದೇವಿ

ದಾವಣಗೆರೆ

ವಿದ್ಯಾಭ್ಯಾಸದ ಜೊತೆಗೆ ಕಾನೂನು ಉಲ್ಲಂಘನೆ ಮತ್ತು ಸಾಮಾಜಿಕ ಪಿಡುಗಗಳನ್ನು ತಡೆಯುವಂತಹ ಕೆಲಸವನ್ನು ಯುವಜನತೆ ಮಾಡಬೇಕೆಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರಾದ ಎಂ.ಶ್ರೀದೇವಿ ಕರೆ ನೀಡಿದರು

ನಗರದ ಚಾಣುಕ್ಯ ಪ್ರಥಮ ದರ್ಜೆ ವಾಣಿಜ್ಯ ಮಹಾವಿದ್ಯಾಲಯ, ರಾಷ್ಟ್ರೀಯ ಸೇವಾ ಯೋಜನೆ ಮತ್ತು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ ಇವುಗಳ ಸಂಯುಕ್ತಾಶ್ರಯದಲ್ಲಿ ಸ್ವಾಮಿ ವಿವೇಕಾನಂದರ 155ನೇ ಜನ್ಮ ದಿನದ ಪ್ರಯುಕ್ತ ಇಂದು ನಗರದ ತೊಗಟವೀರ ಸಮುದಾಯ ಭವನದಲ್ಲಿ ಏರ್ಪಡಿಸಲಾಗಿದ್ದ ರಾಷ್ಟ್ರೀಯ ಯುವ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಾನೂನು ಉಲ್ಲಂಘನೆ ಮತ್ತು ಸಾಮಾಜಿಕ ಪಿಡುಗುಗಳನ್ನು ತಡೆಯುವಂತಹ ಅವಕಾಶ ಯುವಜನತೆಗೆ ಅಪಾರವಾಗಿದ್ದು, ಹೀಗೆ ತಡೆಯುವ ಕೆಲಸ ಮಾಡಿದರೆ ವಿವೇಕಾನಂದರ ಹಾದಿಯಲ್ಲಿ ಸಾಗಿದಂತಾಗುತ್ತದೆ. ತಿಂಗಳಲ್ಲಿ ಒಂದಾದರೂ ಇಂತಹ ಉತ್ತಮ ಕೆಲಸ ಮಾಡುವ ಸಂಕಲ್ಪ ತಡಬೇಕಾಗಿದೆ. ಸಾಮಾಜಿಕ ಪಿಡುಗುಗಳಾದಂತಹ ಬಾಲ್ಯ ವಿವಾಹ, ಲೈಂಗಿಕ ದೌರ್ಜನ್ಯ, ಕಾನೂನುಗಳ ಉಲ್ಲಂಘನೆಯನ್ನು ತಡೆಗಟ್ಟಲು ಪ್ರಯತ್ನಿಸಬೇಕು. ಕಾನೂನಿನ ಬಗ್ಗೆ ತಾವು ತಿಳಿದುಕೊಂಡು ಪರಿಪಾಲಿಸುವ ಜೊತೆಗೆ ತಮ್ಮ ಕುಟುಂಬ, ಸ್ನೇಹಿತರು ಮತ್ತು ತಮ್ಮ ಸುತ್ತಮುತ್ತ ಜಾಗೃತಿ ಮೂಡಿಸುವ ಪ್ರಯತ್ನ ಮಾಡಬೇಕು. ಕಾನೂನು ಉಲ್ಲಂಘನೆ ಕಣ್ಣಿಗೆ ಕಂಡರೂ ತನಗೆ ಸಂಬಂಧಿಸಿದ್ದಲ್ಲವೆಂದು ಸುಮ್ಮನೆ ಕೂರದೇ ತಮ್ಮ ಜವಾಬ್ದಾರಿಯೆಂದು ಭಾವಿಸಿ ತಡೆಯುವ ಪ್ರಯತ್ನ ಮಾಡಬೇಕು ಎಂದರು.



ಸ್ವಾಮಿ ವಿವೇಕಾನಂದರು ಅನೇಕ ಅತ್ಯುತ್ತಮ ವಿವೇಕವಾಣಿ ಯನ್ನು ಕೊಡುಗೆಯನ್ನಾಗಿ ಯುವಜನತೆಗೆ ನೀಡಿದ್ದಾರೆ. ಇದರಲ್ಲಿ ಒಂದು ಸಾಲನ್ನಾದರೂ ಪಾಲನೆ ಮಾಡಿದಲ್ಲಿ ಯಶಸ್ಸಿನ ಮೆಟ್ಟಿಲನ್ನು ಏರಲು ಸಾಧ್ಯವಾಗುತ್ತದೆ. ಹದಿಹರೆಯ ಒಂದು ಡೋಲಾಯಮಾನ ಸ್ಥಿತಿಯಾದರೂ, ಉತ್ತಮ ಆಲೋಚನೆಗಳು, ಧನಾತ್ಮಕ ಚಿಂತನೆ ಮತ್ತು ಆರೋಗ್ಯದ ಕಡೆ ಗಮನ ಹರಿಸಿ ಉತ್ತಮವಾದುದ್ದನ್ನು ಅಳವಡಿಸಿಕೊಳ್ಳಬೇಕು. ನಮ್ಮದು ಯುವಕರ ನಾಡು. ಯುವಪೀಳಿಗೆ ಸಂಖ್ಯೆ ಹೆಚ್ಚಿದೆ. ಹಾಗೂ ಯುವಜನತೆಗೆ ಕಾನೂನು ಉಲ್ಲಂಘನೆ ಸೇರಿದಂತೆ ಸಾಮಾಜಿಕ ಪಿಡುಗಗಳನ್ನು ತಡೆಯುವ ಸಾಕಷ್ಟು ಅವಕಾಶವಿದೆ. ನಾವೆಲ್ಲಾ ಈ ಕುರಿತು ಸಾಮೂಹಿಕ ಪ್ರಯತ್ನ ಮಾಡಿದಾಗ ಮಾತ್ರ ಸಾಧ್ಯವಾಗುತ್ತದೆ. ಸುಸಂಸ್ಕೃತ ಮತ್ತು ಸುಸಜ್ಜಿತ ರಾಷ್ಟ್ರ ನಿರ್ಮಾಣ ಯುವಜನತೆಯಿಂದ ಸಾಧ್ಯ. ಸಮಾಜದಲ್ಲಿ ಅನಿಷ್ಟ ಪದ್ದತಿಗಳು ಕಣ್ಣಿಗೆ ಬಿದ್ದಾಗ ಪೋಲಿಸ್ ಇಲಾಖೆ, ಕಾನೂನು ಸೇವಾ ಪ್ರಾಧಿಕಾರದಂತಹ ಸಂಸ್ಥೆಗಳ ಗಮನಕ್ಕೆ ತಂದು ತಡೆಗಟ್ಟುವ ಕೆಲಸ ಮಾಡಬೇಕು. ತಿಂಗಳಿಗೆ ಒಂದರಂತೆ ವರ್ಷಕ್ಕೆ ಹನ್ನೆರಡು ಉತ್ತಮ ಕೆಲಸ ಮಾಡುವ ಸಂಕಲ್ಪ ತೊಡಬೇಕು ಎಂದು ಕಿವಿಮಾತು ಹೇಳಿದರು.

ಶೈಕ್ಷಣಿಕ ಪರೀಕ್ಷೆಗಳೇ ನಮ್ಮ ಸಾಮರ್ಥ್ಯದ ಅಳತೆಗೋಲು ಅಲ್ಲ. ಉತ್ತಮ ಅಂಕ ಗಳಿಸಿದರೆ ಮಾತ್ರ ಜಾಣರೆಂಬ ಭಾವನೆ ಬೇಡ. ನಮ್ಮ ಸುತ್ತಮುತ್ತ ಅನೇಕ ಅವಕಾಶಗಳಿದು, ಯಾರ ಮೇಲೂ ಅವಲಂಬಿತರಾಗದೇ ಅವುಗಳನ್ನು ಬಳಸಿಕೊಂಡು ಬೆಳೆಯಬೇಕು. ನಿಮ್ಮ ಜೀವನನ್ನು ನೀವೇ ಅತ್ಯುತ್ತಮವಾಗಿ ರೂಪಿಸಿಕೊಳ್ಳಬಹುದಾಗಿದ್ದು, ಸಮಾಜದ ಓರೆ ಕೋರೆಗಳನ್ನು ತಿದ್ದುವ ಕೆಲಸ ನಿಮ್ಮಿಂದಾಗಬೇಕೆಂದು ಆಶಯ ವ್ಯಕ್ತಪಡಿಸಿದರು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ಕೆಂಗಬಾಲಯ್ಯ ಮಾತನಾಡಿ, 1863 ರಲ್ಲಿ ಕಲ್ಕತ್ತದ ವಿಶ್ವನಾಥ ದತ್ತ ಮತ್ತು ಭುವನೇಶ್ವರಿ ದೇವಿ ದಂಪತಿಗೆ ಜನಿಸಿದ ನರೇಂದ್ರನಾಥ ದತ್ತ ಶ್ರೀ ರಾಮಕೃಷ್ಣ ಪರಮಹಂಸರ ಶಿಷ್ಯರಾದ ಮೇಲೆ ವಿವೇಕಾನಂದ ಎಂಬ ಹೆಸರನ್ನು ಪಡೆದರು. ವಿವೇಕಾನಂದರು ಬಾಲ್ಯದಲ್ಲಿ ಅತಿ ತುಂಟರಾಗಿದ್ದರು ಜೊತೆಗೆ ತಾಯಿಯಿಂದ ಅತಿ ಚಿಕ್ಕ ವಯಸ್ಸಿನಲ್ಲೇ ರಾಮಾಯಣ, ಮಹಾಭಾರತದ ಕಥೆಗಳನ್ನು ಕೇಳಿ ತಿಳಿದಿದ್ದರು. ರಾಮಾಯಣ, ಮಹಾಭಾರತವನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕು. ಅದಕ್ಕಿಂತ ಉತ್ತಮ ಗುರುವಿಲ್ಲ. ಸನಾತನ ಧರ್ಮದಿಂದ ತಿಳಿದುಕೊಳ್ಳಬೇಕಾದ ಹೊಣೆ ನಮ್ಮ ಮೇಲಿದೆ. ಸಿನಿಮಾ ನಟ, ನಟಿಯರಂತೆ ಆಗಬೇಕೆಂದು ಎಷ್ಟೋ ವಿದ್ಯಾರ್ಥಿಗಳು ಕನಸು ಕಾಣುತ್ತಾರೆ. ಆದರೆ ಸ್ವಾಮಿ ವಿವೇಕಾನಂದರಂತೆ ಆಗಬೇಕೆಂದು ಕನಸು ಕಾಣುವುದು ವಿರಳ. ಏಕೆಂದರೆ ನಾವೆಲ್ಲಾ ಲೌಕಿಕದಲ್ಲಿ ಕಾಣುವುದೇ ಸತ್ಯವೆಂದು ಅರಿತಿದ್ದೇವೆ. ಆದ್ದರಿಂದ ಇಂತಹ ಮಹಾನ್ ಯುವ ಸನ್ಯಾಸಿಯ ಸಾಧನೆ, ತತ್ವಗಳಲ್ಲಿ ಒಂದನ್ನಾದರೂ ಅಳವಡಿಸಿಕೊಂಡಲ್ಲಿ ಪರಿವರ್ತನೆ ಸಾಧ್ಯ ಎಂದರು.

ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಸದಸ್ಯರಾದ ಎಲ್.ಎಚ್. ಅರುಣ್ ಕುಮಾರ್ ಮಾತನಾಡಿ, ವಿವೇಕಾನಂದರು ಇಡೀ ಮಾನವ ಧರ್ಮದ ಸಮಾನತೆ ಮತ್ತು ಏಕತೆಯನ್ನು ಸಾರಿದವರು. ಎಲ್ಲರಿಗೂ ಘನತೆ ತರುವ ನಿಟ್ಟಿನಲ್ಲಿ ಅವರ ವಿಚಾರಧಾರೆಗಳಿದ್ದು ಅವುಗಳನು ಎಲ್ಲರೂ ಅಳವಡಿಸಿಕೊಳ್ಳಬೇಕೆಂದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಲೋಕಿಕೆರೆ ಸಿದ್ದಪ್ಪ ಟಿ.ಹೆಚ್ ಮಾತನಾಡಿದರು. ಚಾಣುಕ್ಯ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಕೆ.ವಿ.ವೀರಣ್ಣ ಇವರು ಅಧ್ಯಕ್ಷತೆ ವಹಿಸಿದ್ದು, ಚಾಣುಕ್ಯ ಪ್ರಥಮ ದರ್ಜೆ ಕಾಲೇಜಿನ ಕಾರ್ಯದರ್ಶಿ ವೈ.ಟಿ.ಪ್ರೇಮ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ವಿದ್ಯಾರ್ಥಿ ಸಚಿನ್ ವಿವೇಕಾನಂದರ ಕುರಿತು ಮಾತನಾಡಿದರು. ಬಿಬಿಎಂ ವಿದ್ಯಾರ್ಥಿ ಪ್ರಜ್ವಲ್ ಪ್ರಾರ್ಥಿಸಿದರು. ಕನ್ನಡ ಉಪನ್ಯಾಸಕಿ ಶಾಂತಲಾ ಸ್ವಾಗತಿಸಿದರು.


## ವೈಕುಂಠ ಸಮಾರಾಧನೆ



ದಿ.31-12-2017ರಂದು ನಮ್ಮ ಮೊಮ್ಮಗ (ಶ್ರೀಮತಿ ಗಿರಿಜಮ್ಮ ಮತ್ತು ಶ್ರೀ ಎಂ.ಆರ್. ವಸಂತಪ್ಪ ಅವರ ಸುಪುತ್ರ) **ಕೆ.ವಿ. ಸತೀಶ್** ಅವರು ವೈಕುಂಠವಾಸಿಗಳಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ ವೈಕುಂಠ ಸಮಾರಾಧನೆ ಹಾಗೂ ಧರ್ಮಸಭೆಯನ್ನು ದಿ.14-01-2018ರ ಭಾನುವಾರ ಬೆಳಗ್ಗೆ 11ಕ್ಕೆ ಚನ್ನಗಿರಿ ತಾಲ್ಲೂಕು ನಿಲೋಗಲ್ ಗ್ರಾಮದಲ್ಲಿ ನೆರವೇರಿಸಲಾಗುವುದು. ತಾವು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು:
**ಪಾಲ್ದಾರ್ ಗೌಡ್ರು ಮಾಸಡಿ ಶ್ರೀಮತಿ ಲಕ್ಕಮ್ಮ,**
**ಶ್ರೀ ರಾಮಪ್ಪ** ಮತ್ತು ಮಕ್ಕಳು ಹಾಗೂ ಮೊಮ್ಮಕ್ಕಳು, ನಿಲೋಗಲ್.
**ಪಾಲ್ದಾರ್ ಗೌಡ್ರು ವಂಶಸ್ಥರು,** ಮಾಸಡಿ.
ಕಡೇಮನೆ ವಂಶಸ್ಥರು, ಹೊಳೆಹರಳಹಳ್ಳಿ.
ನಿಲೋಗಲ್ ಮತ್ತು ಮಾಸಡಿ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.


## ಫೆಬ್ರವರಿಯಲ್ಲಿ ಸರ್ಕಾರ ಚಿತ್ರ ರಾಜ್ಯಾದ್ಯಂತ ತೆರೆಗೆ

ದಾವಣಗೆರೆ

ಎಸ್.ಪಾರ್ವತಿ ನಿರ್ಮಿಸಿರುವ ಸರ್ಕಾರ ಚಿತ್ರ ಫೆಬ್ರವರಿಯಲ್ಲಿ ರಾಜ್ಯಾದ್ಯಂತ ತೆರೆ ಕಾಣಲಿದೆ ಎಂದು ಚಿತ್ರದ ನಿರ್ದೇಶಕ ಎಸ್.ಮಂಜು ಪ್ರೀತಮ್ ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೌಡಿಸಂ ಜೊತೆಗೆ ಭಾವನಾತ್ಮಕ ಸ್ಪರ್ಷದ ಕಥಾ ಹಂದರ ಹೊಂದಿರುವ ಸರ್ಕಾರ ಚಿತ್ರದಲ್ಲಿ ಅನೇಕ ಹಿರಿಯ ಕಲಾವಿದರು ಅಭಿನಯಿಸಿದ್ದಾರೆ. ಚಿತ್ರದ ಚಿತ್ರೀಕರಣ ಸಂಪೂರ್ಣ ಮುಗಿದಿದ್ದು, ಈಗಾಗಲೇ ಧ್ವನಿ ಸುರಳಿ ಬಿಡುಗಡೆಯಾಗಿದೆ. ಸತೀಶ ಆರ್ಯನ್ ಸಂಗೀತದಲ್ಲಿ 5 ಹಾಡುಗಳು ಉತ್ತಮವಾಗಿ ಮೂಡಿಬಂದಿವೆ. ಅರುಣಕುಮಾರ್ ಛಾಯಾಗ್ರಹಣ ಮುದ ನೀಡುತ್ತದೆ. ಬರುವ ತಿಂಗಳು ರಾಜ್ಯದ ಸುಮಾರು 100 ಚಿತ್ರಮಂದಿರಗಳಲ್ಲಿ ಈ ಚಿತ್ರ ತೆರ ಕಾಣಲಿದೆ ಎಂದು ಹೇಳಿದರು. ನಟ ಜಗದೀಶ ಮಾತನಾಡಿ, ರೌಡಿಸಂ ಎಂಬುದು ನೀರಿನ ಮೇಲಿನ ಗುಳ್ಳೆಯಂತೆ. ಅದು ಯಾವಾಗ ಒಡೆಯುತ್ತದೋ ಗೊತ್ತಿಲ್ಲ. ಆದ್ದರಿಂದ ರೌಡಿಸಂನಿಂದ ದೂರ ಇರಬೇಕು ಎಂಬ ಸಂದೇಶದೊಂದಿಗೆ ತಾಯಿಯ ಪ್ರೀತಿ-ಪ್ರೇಮದ ಸುತ್ತ ಚಿತ್ರಕಥೆ ಹೆಣೆಯಲಾಗಿದೆ. ಈ ಮೊದಲು ಉಪನ್ಯಾಸಕರಾಗಿ ಕಾರ್ಯನಿರ್ವಹಿತ್ತಿದ್ದ ನಾನು, ಕುಟುಂಬದ ಬೆಂಬಲದೊಂದಿಗೆ ಸಿನಿಮಾ ರಂಗಕ್ಕೆ ಕಾಲಿಟ್ಟಿದ್ದು, ನಾನು ಅಭಿನಯಿಸಿರುವ ಮೊದಲ ಚಿತ್ರ ಯಶಸ್ವಿ ಪ್ರದರ್ಶನ ಕಾಣಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.


**ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ**
( ಕರ್ನಾಟಕ ಸರ್ಕಾರದ ಉದ್ಯಮ )
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಎತ್ತಿನಹೊಳೆ ಯೋಜನಾ ವಿಭಾಗ, ನಂ:4 ಮಧುಗಿರಿ– 572132, ತುಮಕೂರು ಜಿಲ್ಲೆ. ದೂ ಸಂಖ್ಯೆ: 08137–282112 eeyetmadhugiri4@gmail.com
ಕ್ರಸಂ: ಕಾ.ಇಂ/ವಿ.ಜ.ನಿ.ನಿ/ಎ.ಹೋ.ಯೋ/ವಿ.ನಂ–4/ಮಧುಗಿರಿ/ತಿ.ಟೆ.ಸಂ. 26. 27& 28/ಸ.ಇಂ.1/2017–18/ ದಿನಾಂಕ: 08.01.2018

**ಸಂಕ್ಷಿಪ್ತ ತಿದ್ದುಪಡಿ ಅಲ್ಪಾವಧಿ ಟೆಂಡರ್ ಪ್ರಕಟಣೆ : 26,27,28–1**
**(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)**

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ 2017–18 ನೇ ಸಾಲಿನಲ್ಲಿನ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಡಿ ಕೊರಟಗೆರೆ ವಿಧಾನಸಭಾ ಕ್ಷೇತ್ರದಡಿಯಲ್ಲಿ ಕೈಗೊಳ್ಳಲು ಟೆಂಡರ್ ಆಹ್ವಾನಿಸಲಾಗಿದ್ದ ಕಾಮಗಾರಿಗಳ (ಅಲ್ಪಾವಧಿ ಟೆಂಡರ್ ಪ್ರಕಟಣೆ: 26,27&28) ಟೆಂಡರ್ ಪ್ರಕಟಣೆಯ ದಿನಾಂಕಗಳನ್ನು, ಕೆಲವು ತಾಂತ್ರಿಕ ಹಾಗೂ ಆಡಳಿತಾತ್ಮಕ ಕಾರಣಗಳಿಂದ ಅನಿರ್ದಿಷ್ಟ ಅವಧಿಗೆ ಮುಂದೂಡಲಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ–04, ಮಧುಗಿರಿ.



**ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ**
ಬೆಳಗುಂಬ ರಸ್ತೆ, ತುಮಕೂರು–572 103, ದೂ: 0816–2272280,
ಫ್ಯಾಕ್ಸ್: 0816–2255761, ಇ–ಮೇಲ್: tudatmk@yahoo.co.in ವೆಬ್‌ಸೈಟ್: tuda.co.in
ಸಂಖ್ಯೆ: ಟಿಯುಡಿಎ/ಯೋಶಾ/ಭೂ.ಉ.ಬ/53/2017–18/2653 ದಿನಾಂಕ: 09.01.2018

**ಸಾರ್ವಜನಿಕ ಪ್ರಕಟಣೆ**

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಈ ಕೆಳಕಂಡ ಪ್ರದೇಶವನ್ನು ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯಂತೆ ಕೈಗಾರಿಕಾ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಗಾಗಿ ಅರ್ಜಿದಾರರು ಕೋರಿರುತ್ತಾರೆ. ಪರಿಶೀಲಿಸಲಾಗಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯ ಕಲಂ 14(ಎ) ರಂತೆ ಈ ಪ್ರಕಟಣೆಯನ್ನು ನೀಡಲಾಗಿರುತ್ತದೆ.
ಪ್ರಶ್ನಿತ ಜಾಗೆಯಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳುಳ್ಳ ಸುಸಜ್ಜಿತವಾದ ವಸತಿ ವಿನ್ಯಾಸವನ್ನು ಅಭಿವೃದ್ಧಿಪಡಿಸಿ ಕೈಗೆಟಕುವ ದರದಲ್ಲಿ ನಿವೇಶನ ರಹಿತರಿಗೆ ನಿವೇಶನವನ್ನು ಹೊಂದುವ ಅವಕಾಶವನ್ನು ಕಲ್ಪಿಸುವ ಸಾರ್ವಜನಿಕ ಹಿತಾಸಕ್ತಿಯನ್ನು ಹೊಂದಿರುವುದಾಗಿ ಅರ್ಜಿದಾರರು ತಿಳಿಸಿರುತ್ತಾರೆ.
ಈ ಸಂಬಂಧ ಅರ್ಜಿದಾರರು ಭೂ ಉಪಯೋಗ ಬದಲಾವಣೆ ಕೋರಿರುವ ಪ್ರಸ್ತಾವನೆಗಳಿಗೆ ಕಾಯ್ದೆಯಲ್ಲಿನ ಅಂಶಗಳನ್ವಯ ಸಾರ್ವಜನಿಕರಿಂದ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಪ್ರಕಟಣೆಯು ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸೂಕ್ತ ದಾಖಲಾತಿಗಳೊಂದಿಗೆ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು ಇವರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವಂತಹ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

| ಕ್ರ ಸಂ. | ಅರ್ಜಿದಾರರ ಹೆಸರು | ತಾಲ್ಲೂಕು | ಹೋಬಳಿ | ಗ್ರಾಮ | ಸರ್ವೆ ನಂ. | ವಿಸ್ತೀರ್ಣ ಎ/ ಗುಂ | ಮಹಾಯೋಜನೆಯಲ್ಲಿ ನಿಗದಿಪಡಿಸಿರುವ ಭೂ ಉಪಯೋಗ | ಹೊಸದಾಗಿ ನಿಗದಿಪಡಿಸಲು ಕೋರಿರುವ ಭೂ ಉಪಯೋಗ |
|---|---|---|---|---|---|---|---|---|
| 1 | ಎಂ.ಎಸ್. ಮಂಜುನಾಥಗುಪ್ತ ಉರುಫ್ ಎಂ.ಎಸ್. ಮಂಜುನಾಥಶೆಟ್ಟಿ ಬಿನ್ ಎ.ಕೆ. ನಾಗರಾಜಶೆಟ್ಟಿ | ತುಮಕೂರು | ಕಸಬಾ | ಮರಳೇನಹಳ್ಳಿ | 68/7 | 02ಎ– 14 ಗು | ಕೈಗಾರಿಕಾ | ವಸತಿ |

ಈ ಮೇಲ್ಕಂಡ ಪ್ರಕಟಣೆಯಲ್ಲಿ ತಿಳಿಸಿರುವ ಜಮೀನುಗಳನ್ನು ಯಾವುದಾದರೂ ಇಲಾಖೆ/ಪ್ರಾಧಿಕಾರವು ಸಾರ್ವಜನಿಕ ಉದ್ದೇಶಕ್ಕಾಗಿ ಭೂ ಸ್ವಾಧೀನ ಪ್ರಕ್ರಿಯೆಯನ್ನು ಕೈಗೊಂಡಿದ್ದಲ್ಲಿ ನಿಗಧಿತ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ಮಾಹಿತಿಯನ್ನು ಸಲ್ಲಿಸುವುದು. ಇಲ್ಲವಾದಲ್ಲಿ ಈ ಜಮೀನುಗಳು ಯಾವುದೇ ಭೂಸ್ವಾಧೀನಕ್ಕೆ ಒಳಪಟ್ಟಿರುವುದಿಲ್ಲ ಎಂದು ತಿಳಿದು, ಅರ್ಜಿದಾರರ ಕೋರಿಕೆಯನ್ನು ಪರಿಗಣಿಸಲಾಗುವುದು.

ಸಹಿ/– ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು


# ವಿವೇಕಾನಂದರು ಯುವಜನರ ಆಶಾಕಿರಣ : ಎನ್.ಸಿದ್ದೇಶ್ವರ್

ದಾವಣಗೆರೆ

ಸ್ವಾಮಿ ವಿವೇಕಾನಂದರು ಯುವಜನತೆಯ ಆಶಾಕಿರಣವಿದ್ದಂತೆ, ಅವರ ತತ್ವಾದರ್ಶಗಳನ್ನು ಯುವಜನತೆ ತಮ್ಮ ಜೀವನದಲ್ಲಿ ಅಳವಡಿಸಿಕೊಂಡಲ್ಲಿ ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬಹುದೆಂದು ಉಪವಿಭಾಗಧಿಕಾರಿ ಎನ್.ಸಿದ್ದೇಶ್ವರ್ ಹೇಳಿದರು.

ಕಾಲೇಜು ಶಿಕ್ಷಣ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಎಆರ್‌ಜಿ ಕಲಾ ವಾಣಿಜ್ಯ ಮಹಾವಿದ್ಯಾಲಯ ದಾವಣಗೆರೆ ಇವರುಗಳ ಸಂಯುಕ್ತಾಶ್ರಯದಲ್ಲಿ ಸ್ವಾಮಿ ವಿವೇಕಾನಂದರ 155ನೇ ಜನ್ಮ ದಿನಾಚರಣೆ 2017-18ನೇ ಸಾಲಿನ ರಾಷ್ಟ್ರೀಯ ಯುವ ಸಪ್ತಾಹ ಅಂಗವಾಗಿ ಎಆರ್‌ಜಿ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಯುವ ಸಮ್ಮೇಳನ ಕಾರ್ಯಕ್ರಮದಲ್ಲಿ ಸ್ವಾಮಿ ವಿವೇಕಾನಂದ ಅವರ ಭಾವಚಿತ್ರಕ್ಕೆ ಬಣ್ಣ ಹಚ್ಚುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಸ್ವಾಮಿ ವಿವೇಕಾನಂದರು ಜಗತ್ತಿನ ಎಲ್ಲಾ ರಾಷ್ಟ್ರಗಳು ಭಾರತದತ್ತ ತಿರುಗಿ ನೋಡುವಂತೆ ಮಾಡಿದ ಮಹಾನ್ ವ್ಯಕ್ತಿ, ವೇದಾಂತ ಕೇಸರಿ. ಪಾಶ್ಚಿಮಾತ್ಯ ಜಗತ್ತಿಗೆ ಭಾರತದ ಜ್ಞಾನಮಟ್ಟ ತಿಳಿಯುವಂತೆ ಮಾಡಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಅಮೇರಿಕಾದ ಷಿಕಾಗೋದಲ್ಲಿ ಭಾಷಣ ಮಾಡಿದ ಅವರು ಪ್ರಾರಂಭದಲ್ಲಿ ಪ್ರೀತಿಯ ಸಹೋದರ, ಸಹೋದರಿಯರೇ ಎಂದು ಮಾತು ಆರಂಭಿಸಿ ವಿಶ್ವ ಭ್ರಾತೃತ್ವವನ್ನು ಸಾರಿದ ವ್ಯಕ್ತಿ ಎಂದು ಸ್ವಾಮಿ ವಿವೇಕಾನಂದರನ್ನು ಬಣ್ಣಿಸಿದರು.

ಇಂದಿಗೆ 155 ನೇ ಜನ್ಮ ದಿನಾಚರಣೆಯನ್ನು ಆಚರಿಸುತ್ತಿರುವುದು ಹೆಮ್ಮೆಯ ವಿಷಯ. ಆದರೆ ಅವರು ಕನಸು ಕಂಡಂತಹ ಯುವಜನರ ಭಾರತ ಇದುವರೆಗೂ ಆಗಿಲ್ಲವೆಂಬುದೇ ಬೇಸರ. ಸ್ವಾಮಿ ವಿವೇಕಾನಂದರು ತಮ್ಮ 30ನೇ ವಯಸ್ಸಿನಲ್ಲಿಯೇ ಪ್ರಪಂಚ ತನ್ನತ್ತ ತಿರುಗಿ ನೋಡುವಂತಹ ಸಾಧನೆ ಮಾಡಿದರು. ಇಂತಹ ಆದರ್ಶಗಳನ್ನು ಯುವಜನತೆ ಪಾಲಿಸಬೇಕು. ಸೋಮಾರಿಯಾಗಿ ಕೂರಬೇಡಿ, ನಿಮ್ಮ ಪ್ರಜ್ಞೆ ಜಾಗೃತವಾಗಿರಲಿ, ನಿಮ್ಮ ಕರ್ತವ್ಯವೇನು ಎಂಬುದನ್ನು ಮೊದಲು ಅರಿತು ನಿಮ್ಮ ಗುರಿ ತಲುಪಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.



ಪ್ರತಿಯೊಬ್ಬ ವ್ಯಕ್ತಿ ಮೊದಲು ತನ್ನ ಜೀವನಕ್ಕೆ ತಾನೇ ನಾಯಕ ಎಂಬುದನ್ನು ಅರಿಯಬೇಕು. ನಾವು ಏನು ಮಾಡಬಹುದು, ನಮ್ಮ ಜೀವನ ಹೇಗೆ ರೂಪಿಸಿಕೊಳ್ಳಬೇಕು ಹಾಗೂ ಸಮಾಜಕ್ಕೆ ಯಾವ ರೀತಿ ಸಹಾಯ ಮಾಡಬಹುದು ಎಂಬುದನ್ನು ಸ್ಪಷ್ಟ ನಿಲುವುಗಳೊಂದಿಗೆ ಗುರುತಿಸಬೇಕು. ಅತ್ಯುತ್ತಮವಾದ ಗುರಿಯೊಂದಿಗೆ ಜೀವನ ನಡೆಸಬೇಕು. ಗುರಿ ತಲುಪುವವರೆಗೂ ನಿರಂತರವಾಗಿ ಪ್ರಯತ್ನ ಪಡಬೇಕು. ಆದರೆ ನಮ್ಮ ಗುರಿಗಳು ಸಮಾಜಕ್ಕೆ ಮತ್ತು ನಮ್ಮ ಜೀವನಕ್ಕೆ ಹಿತಕರವಾಗಿರಬೇಕು ಎಂದು ತಮ್ಮ ಜೀವನ ಸಾಧನೆ ಕುರಿತು ವಿವರಿಸಿದರು.

ಮನುಷ್ಯ ಜೀವನದಲ್ಲಿ ಆತ್ಮತೃಪ್ತಿ ಮತ್ತು ಪರಮಾನಂದ ಎಂಬುದು ಎಲ್ಲರಿಗೂ ಸಿಗುವುದಿಲ್ಲ. ಆಧ್ಯಾತ್ಮ, ಸಹಾಯ ಮನೋಭಾವದಲ್ಲಿ ಸಿಗುವಂತಹ ಸುಖದ ಭಾವನೆಗಳಿವು. ಆದ್ದರಿಂದ ಪ್ರತಿಯೊಬ್ಬರು ಉತ್ತಮ ಜೀವನ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ಸ್ವಾಮಿ ವಿವೇಕಾನಂದರಂತಹ ಮಹಾನ್ ಪುರುಷರ ಜೀವನಾಂಶಗಳನ್ನು ತಿಳಿದುಕೊಂಡು ಅದರಂತೆ ಉತ್ತಮ ಜೀವನ ನಡೆಸಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಲೆಕ್ಕ ಪರಿಶೋಧಕರಾದ ನಟರಾಜ್ ಮುರಶಿಳ್ಳಿ ಮಾತನಾಡಿ, ಪ್ರತಿಯೊಂದು ಆತ್ಮಕ್ಕೂ ಚೈತನ್ಯವಿರುತ್ತದೆ. ಅದನ್ನು ಪ್ರಕಟಗೊಳಿಸಬೇಕು ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ. ಇದನ್ನು ಯುವಜನತೆ ಸ್ವೀಕರಿಸಬೇಕು. ಭಾರತದ ಜನಸಂಖ್ಯೆಯಲ್ಲಿ ಯುವಜನತೆ ಪ್ರಮಾಣ ಹೆಚ್ಚಿದ್ದು ಭಾರತ ಯುವಜನತೆಯ ರಾಷ್ಟ್ರವಾಗಿದೆ. ಯುವಜನತೆ ಮನಸ್ಸು ಮಾಡಿದರೆ ನಮ್ಮ ಭಾರತ ದೇಶವನ್ನು ಪ್ರಪಂಚದಲ್ಲಿ ನಂ.1 ಸ್ಥಾನಕ್ಕೇರಿಸುವಷ್ಟು ಸಾಮರ್ಥ್ಯ ಅವರಲ್ಲಿದೆ ಎಂಬುದು ಸತ್ಯ. ಆದರೆ ಇಂದಿನ ಯುವ ಜನತೆ ಸಮಾಜ ಹಾಗೂ ಕುಟುಂಬದಿಂದ ದೂರವಾಗಿ ಗೂಗಲ್‌ನಂತಹ ಸಾಮಾಜಿಕ ಜಾಲತಾಣಗಳಲ್ಲಿ ಮುಳುಗಿ ಏಕಾಂಗಿಗಳಾಗಿ ಸಮಯವನ್ನು ವ್ಯರ್ಥ ಮಾಡುತ್ತಿದ್ದಾರೆ. ಜೀವನಕ್ಕೆ ಎಷ್ಟು ಬೇಕೋ ಅಷ್ಟು ತಂತ್ರಜ್ಞಾನವನ್ನು ಬಳಸಬೇಕೇ ವಿನಃ ತಂತ್ರಜ್ಞಾನಗಳು ನಮ್ಮ ಬದುಕನ್ನು ಹಾಳು ಮಾಡಬಾರದು ಎಂದು ಹೇಳಿದರು.

ವೇದಿಕೆ ಕಾರ್ಯಕ್ರಮದ ಮೊದಲು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಶಾಲಾ-ಕಾಲೇಜು ಮಕ್ಕಳಿಗೆ ಸ್ವಾಮಿ ವಿವೇಕಾನಂದರ ಭಾವಚಿತ್ರ ಬಿಡಿಸುವ ಸ್ಪರ್ಧೆ ಏರ್ಪಡಿಸಲಾಗಿತ್ತು. ಸ್ಪರ್ಧೆಯಲ್ಲಿ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಕೆ.ಬಿ.ಕುಬೇರಪ್ಪ ಅವರು ಅಧ್ಯಕ್ಷತೆ ವಹಿಸಿದ್ದರು. ವಿದ್ಯಾರ್ಥಿ ನಿಖಿಲ್ ಸ್ವಾಮಿ ವಿವೇಕಾನಂದ ಅವರನ್ನು ಕುರಿತು ಮಾತನಾಡಿದರು. ಪ್ರಾಧ್ಯಾಪಕ ಪ್ರೊ. ಮಲ್ಲಿಕಾರ್ಜುನ ಹಲಸಂಗಿ ಅವರು ಪ್ರಾಸ್ತವಿಕವಾಗಿ ಮಾತನಾಡಿದರು. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರಾದ ಬಿ. ಶ್ರೀನಿವಾಸ್, ಪ್ರಾಧ್ಯಾಪಕ ಕೆ.ಎಸ್. ಬಸವರಾಜಪ್ಪ ಹಾಗೂ ಸಹ ಪ್ರಾಧ್ಯಾಪಕರುಗಳು ಇತರರು ಉಪಸ್ಥಿತರಿದ್ದರು.

PUBLISHED, PRINTED AND OWNED BY S NAGANNA , PUBLISHED AT NO. 1 pragathi , B H Road Tumkur 572102. PRINTED BY SHILPASHREE OFFSET PRINTER at PRAGATHI Building BH Road Tumkur -572102 POST REG NO . L-2/RNP- 364/TMR/2018-20 RNI NO KAR KAN /1988/2925 EDITOR: S NAGANNA

CMYK CMYK CMYK